# ಬೆಟ್ಟದ ಹುಡುಗಿ

ಪ್ರವೀಣ ಕುಲಕರ್ಣಿ



ಹಿಮಾಲಯದ ಶ್ರೇಣಿಯಲ್ಲಿ ಪರ್ವತ ಏರುವುದು, ಚಾರಣ ಮಾಡುವುದು ಸುಲಭದ ಮಾತಲ್ಲ. ಸಾಧನೆಯ ಛಲವೂ ಬೆಟ್ಟದಷ್ಟೇ ಎತ್ತರಕ್ಕೆ ಇದ್ದರೆ ಮಾತ್ರ ಈ ಹಿಮಚ್ಛಾದಿತ ಘಟ್ಟದ ಕಡೆಗೆ ಹೆಜ್ಜೆ ಹಾಕಲು ಸಾಧ್ಯ. ಅಪಾಯದ ಅರಿವಿದ್ದರೂ ಪ್ರತಿಕೂಲ ಹವಾಮಾನ ಕಾಡಲಿದೆ ಎಂಬುದು ಗೊತ್ತಿದ್ದರೂ ಪ್ರಕೃತಿಪ್ರಿಯರ ದಂಡುಗಳು ಸದ್ದಿಲ್ಲದೆ ಇಂಥಲ್ಲೆಲ್ಲ ಚಾರಣ ಮಾಡಿಬರುವುದು ವಾಡಿಕೆ. ಕೆಲವೊಮ್ಮೆ ಹಿಮಾಲಯದ ಮಡಿಲಿನಿಂದ ಕೆಟ್ಟ ವಾರ್ತೆಗಳು ಬಂದು ಮನಸ್ಸನ್ನು ಕಲಕುವುದೂ ಉಂಟು. ಕಳೆದ ವಾರವಷ್ಟೇ ಸಹಸ್ರ ತಾಲ್‌ನತ್ತ ಚಾರಣಕ್ಕೆ ಹೋದವರಲ್ಲಿ ಒಂಬತ್ತು ಮಂದಿ ಹಿಮದ ನಡುವೆಯೇ ಪ್ರಾಣ ಕಳೆದುಕೊಳ್ಳುವಂತಾದ ಘಟನೆ ಇನ್ನೂ ಕಾಡುತ್ತಿದೆ. ಆದರೆ, ಈ ಲೇಖನ ಹೇಳಹೊರಟಿರುವುದು ಅಂತಹ ದುಃಖದ ಕಥೆಯನ್ನಲ್ಲ, ಭಾರತೀಯ ಬಾಲಕಿಯೊಬ್ಬಳು ಮೌಂಟ್ ಎವರೆಸ್ಟ್ ಹತ್ತಿ ಇಳಿದ ಯಶೋಗಾಥೆಯನ್ನು.

‘ಟಾಟಾ ಸ್ಟೀಲ್ ಅಡ್ವೆಂಚರ್ ಫೌಂಡೇಷನ್’ನಲ್ಲಿ ತರಬೇತಿ ಪಡೆದಿದ್ದ ಭಾರತದ ಕಾಮ್ಯಾ ಕಾರ್ತಿಕೇಯನ್ ಎಂಬ ಬಾಲಕಿ ಎವರೆಸ್ಟ್ ಮೇಲೆ ತಿರಂಗಾ ಹಾರಿಸಿ ಬಂದಿದ್ದಾಳೆ. ಅವಳಿಗೆ ಈಗಷ್ಟೇ 16ರ ಹರೆಯ. ಕಾಮ್ಯಾಳೊಂದಿಗೆ ಅವಳ ತಂದೆ, ಭಾರತೀಯ ನೌಕಾದಳದಲ್ಲಿ ಕಮಾಂಡರ್ ಆಗಿರುವ ಎಸ್. ಕಾರ್ತಿಕೇಯನ್ ಸಹ ಜತೆಗೂಡಿದ್ದರು. ಎವರೆಸ್ಟ್‌ನ ತುತ್ತತುದಿ ಜಗತ್ತಿನ ಅತ್ಯಂತ ಎತ್ತರದ ತಾಣ ಎಂದೇ ಹೆಸರಾಗಿದೆ. ಕಾಮ್ಯಾ ಅಲ್ಲಿ ತನ್ನ ಹೆಜ್ಜೆಗುರುತು ಮೂಡಿಸಿ ಬಂದಿದ್ದಾಳೆ. ಇಷ್ಟೊಂದು ಎತ್ತರದವರೆಗೆ ಪರ್ವತಾರೋಹಣ ಮಾಡಿದ ಭಾರತದ ಮೊದಲ ಬಾಲಕಿ ಎಂಬ ಹಿರಿಮೆಗೂ ಅವಳು ಪಾತ್ರಳಾಗಿದ್ದಾಳೆ. ಅಂದಹಾಗೆ, ಅವಳು ಪರ್ವತದ ತುದಿಯನ್ನು ತಲುಪಲು ಕ್ರಮಿಸಿದ ದೂರ 8,848 ಮೀಟರ್. ನೇಪಾಳದ ಕಡೆಯಿಂದ ಅವಳು ಪರ್ವತಾರೋಹಣ ಮಾಡಿದ್ದಳು.

ಕಾಮ್ಯಾ ಪ್ರಕಾರ, ಹಿಮಾಲಯದ ಮಡಿಲಲ್ಲಿ ಬೆಳಿಗ್ಗೆ ಎದ್ದು ಎತ್ತ ನೋಡಿದರೂ ಬೆಣ್ಣೆಯಂತೆ ತುಂಬಿದ ಮಂಜಂತೆ. ಮಂಜು ಸರಿಯುತ್ತ ಸೂರ್ಯ ಹೊರಬಂದಾಗ ಮೆಲ್ಲಮೆಲ್ಲನೆ ಪರ್ವತಗಳು ಆಗಸಕ್ಕೇರಿದ ತಮ್ಮ ದೈತ್ಯಾಕಾರವನ್ನು ಕಾಣಿಸುತ್ತವಂತೆ. ‘ಹಿಮದ ಬಿಳಿಯ ರಾಶಿಯಲ್ಲಿ ನಾವು ಪಡೆಯುವ ಅನುಭೂತಿಯೇ ಬೇರೆ. ಮಾನವರು ಎಷ್ಟು ಚಿಕ್ಕವರು ಎನ್ನುವುದು ಗೊತ್ತಾಗುವುದು ಇಂತಹ ಬೃಹತ್ ಪರ್ವತದ ಮುಂದೆ ನಾವು ನಿಂತಾಗ’ ಎಂದು ಅವಳು ಪ್ರಬುದ್ಧವಾಗಿ ಮಾತನಾಡುತ್ತಾಳೆ. ಹಿಮಾಲಯದ ಹಲವು ಬೆಟ್ಟ–ಗುಡ್ಡಗಳ ಹೆಸರುಗಳು ಅವಳ ಬಾಯಿಯಲ್ಲಿವೆ. ಅಲ್ಲಿ ಬೆಳೆಯುವ ಅಪರೂಪದ ಗಿಡ–ಮರಗಳ ಕುರಿತೂ ಅವಳಿಗೆ ಗೊತ್ತು. ಸ್ಥಳೀಯ ಜನಸಂಸ್ಕೃತಿಯ ಪರಿಚಯವನ್ನೂ ಅವಳು ಮಾಡಿಕೊಂಡಿದ್ದಾಳೆ. ‘ಬೆಟ್ಟದ ಮುಂದೆ ನೀವು ವಿನೀತರಾಗಿ ನಿಲ್ಲಿ. ಅದು ಎಲ್ಲವನ್ನೂ ನಿಮಗೆ ಪ್ರೀತಿಯಿಂದ ಮೊಗೆದು ಕೊಡುತ್ತದೆ’ ಎಂದೂ ಹೇಳುತ್ತಾಳೆ.

ಮೌಂಟ್ ಎವರೆಸ್ಟ್ ಏರುವ ಮೂಲಕ ಕಾಮ್ಯಾ ಇನ್ನೊಂದು ವಿಕ್ರಮವನ್ನೂ ಸಾಧಿಸಿದ್ದಾಳೆ. ಜಗತ್ತಿನ ಎಲ್ಲ ಏಳೂ ಭೂಖಂಡಗಳ ಎತ್ತರದ ಶಿಖರಗಳನ್ನು ಏರಿದ ಸಾಧನೆ ಅದಾಗಿದೆ. ಮುಂಬೈನ ‘ನೇವಿ ಚಿಲ್ಡ್ರನ್ ಸ್ಕೂಲ್’ನ 12ನೇ ತರಗತಿ ವಿದ್ಯಾರ್ಥಿಯಾಗಿರುವ ಆಕೆಗೆ ಬಾಲ್ಯದಿಂದಲೂ ಸಾಹಸದ ಪ್ರವೃತ್ತಿ ಮೈಗೂಡಿದೆಯಂತೆ. ಕಾಮ್ಯಾಳ ಸಾಧನೆಯನ್ನು ಭಾರತ ಮಾತ್ರವಲ್ಲದೆ ಜಗತ್ತಿನ ಎಲ್ಲೆಡೆ ಸಂಭ್ರಮಿಸಲಾಗುತ್ತಿದೆ. ಯುವ ಪೀಳಿಗೆಯ ಪಾಲಿಗೆ ಅವಳೊಂದು ಸ್ಫೂರ್ತಿ ಎಂದೂ ಕೊಂಡಾಡಲಾಗಿದೆ. ನೇಪಾಳದಲ್ಲಿ ಕಾಮ್ಯಾಗೆ ದೊಡ್ಡ ಸನ್ಮಾನ ಮಾಡಲಾಗಿದೆ. ಬೆಟ್ಟ ಏರುವ ಸಾಹಸ ಪ್ರವೃತ್ತಿಗಾಗಿ ಅವಳಿಗೆ ‘ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ’ ಸಹ ಸಿಕ್ಕಿದೆ. ಏಳನೇ ವಯಸ್ಸಿನಲ್ಲಿಯೇ ಬೆಟ್ಟದೊಂದಿಗೆ ಅವಳ ಸ್ನೇಹ ಶುರುವಾಗಿದೆ. ಚಂದ್ರಶಿಲಾ, ಹರ್ ಕಿ ದುನ್, ಕೇದಾರನಾಥ ಮತ್ತು ರೂಪ್‌ಕುಂಡ ಸರೋವರದ ಯಾತ್ರೆಗಳನ್ನು ಅವಳು ಕೈಗೊಂಡಿದ್ದಾಳೆ. ಪದೇ ಪದೇ ಹಿಮಾಲಯದ ತಪ್ಪಲಿಗೆ ಎಡತಾಕಿದ್ದಾಳೆ.

ಕಾಮ್ಯಾ ಮತ್ತು ಅವಳ ತಂಡ ಏಪ್ರಿಲ್‌ನಲ್ಲೇ ಹಿಮಾಲಯದ ತಪ್ಪಲಿನಲ್ಲಿ ಬಿಡಾರ ಹೂಡಿತ್ತು. ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡು, ನಿತ್ಯ ಕೆಲವು ದಿನಗಳವರೆಗೆ ಅಭ್ಯಾಸ ಮಾಡಿದ ಬಳಿಕ ಮೇ 16ರಂದು ಎವರೆಸ್ಟ್ ಪರ್ವತಾರೋಹಣ ಆರಂಭಿಸಲಾಯಿತು. ಮೇ 20ರ ನಸುಕಿನಲ್ಲಿ ಈ ತಂಡ ಬೆಟ್ಟದ ತುದಿಯನ್ನು ತಲುಪಿತ್ತು. ಟಾಟಾ ಸ್ಟೀಲ್ ಅಡ್ವೆಂಚರ್ ಫೌಂಡೇಷನ್, ಅವಳ ಸಾಹಸದ ಯಾತ್ರೆಯ ಪ್ರತಿ ಮೈಲಿಗಲ್ಲನ್ನೂ ದಾಖಲಿಸಿದೆ. ‘ಜಗತ್ತಿನ ಎಲ್ಲ ಖಂಡಗಳ ಅತ್ಯುನ್ನತ ಗಿರಿಶ್ರೇಣಿಯನ್ನು ಏರಿದ ಖುಷಿ ನನಗಿದೆ. ತಂದೆಯಿಂದಲೇ ನನಗೆ ಪ್ರೇರಣೆ ಸಿಕ್ಕಿದೆ’ ಎಂದು ಹೇಳುವ ಕಾಮ್ಯಾ, ತನ್ನ ಸಾಧನೆಯಿಂದ ಇತರ ಮಕ್ಕಳಿಗೆ ಪ್ರೇರಣೆಯಾಗಿದ್ದಾಳೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65